**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಚಿಕ್ಕಮಗಳೂರು.**

**<u>ಸಿ.ಸಿ.1852/2022</u>**

| | | |
|---|---|---|
| ಸಾಕ್ಷಿದಾರರ ಹೆಸರು : | ರಾಮ್ ಕುಮಾರ್ | ಪಿ.ಡಬ್ಲ್ಯೂ.2 |
| ತಂದೆಯ ಹೆಸರು : | ಅಮ್ಮಯಪ್ಪ | ಸಿ. ಡಬ್ಲ್ಯೂ.5 |
| ವಯಸ್ಸು : | 27 ವರ್ಷ | |
| ವೃತ್ತಿ : | ಕೂಲಿ ಕೆಲಸ | |
| ವಾಸ : | ಕಲ್ಯಾಣನಗರ, ಚಿಕ್ಕಮಗಳೂರು. | |

<u>ದಿನಾಂಕ: **08-07-2024** ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ:-</u>

ಚಾಸಾ-1 ರವರು ನನಗೆ ಗೊತ್ತು. ಸಾಕ್ಷಿ ಮುಂದುವರಿದು ಅವರು ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಆರೋಪಿತರು ನನಗೆ ಗೊತ್ತು. ಚಾಸಾ-4 ರವರು ನನ್ನ ತಾಯಿ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಈ ಪ್ರಕರಣದ ಸಂಬಂಧ ಪೊಲೀಸರ ಮುಂದೆ ಆರೋಪಿತರ ವಿರುದ್ಧ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲು: ಮಾನ್ಯ ಎಪಿಪಿ ರವರಿಂದ:-</u>

ಕಲ್ಯಾಣ ನಗರದ ಬೈಪಾಸ್ ರಸ್ತೆಯ ವಾರ್ಡ್ ನಂ.2 ರಲ್ಲಿ ಇರುವ ಅಸೆಸ್ಮೆಂಟ್ ನಂ.22 ರ ನಿವೇಶನ ಮತ್ತು ವಾಸದ ಮನೆ ಆಶ್ರಯ ಯೋಜನೆಯ ಅಡಿ ನನ್ನ ತಾಯಿಗೆ ಮಂಜೂರಾಗಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನ ನಾನು ಮತ್ತು ನನ್ನ ತಾಯಿ ಸೇರಿ ಚಾಸಾ-1 ರವರಿಗೆ ದಿ:07.01.2016 ರಂದು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಆಸ್ತಿಯನ್ನ ಮಾರಾಟ ಮಾಡುವ

ಮೊದಲು ನಾನು ಮತ್ತು ನನ್ನ ಕುಟುಂಬಸ್ಥರು ವಾಸ ಇದ್ದೆವು ಎಂದರೆ ಸರಿ. ನನ್ನಿಂದ ಖರೀದಿ ಮಾಡಿದ ಸುಬ್ರಹ್ಮಣ್ಯ ಈತ ಸದರಿ ಮನೆಯನ್ನ ನವೀಕರಿಸಿ ಇಂದಿರಾ ಕೋಂ ಸಿದ್ದಪ್ಪಶೆಟ್ಟಿ ಎನ್ನುವವರಿಗೆ ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಸಂಬಂಧ ದಿಃ**17.12.2014** ರಂದು ಸದರಿಯವರ ನಡುವೆ ಬಾಡಿಗೆ ಕರಾರು ಪತ್ರ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇಂದಿರಾ ಈಕೆ ಬಾಡಿಗೆ ಕೊಡಲು ತಪ್ಪಿದ್ದರಿಂದ ಚಾಸಾ**-1** ರವರು ಅವರನ್ನ ಖಾಲಿ ಮಾಡುವಂತೆ ಕೇಳಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆಗ ಇಂದಿರಾ ಈಕೆ ಸದರಿ ಮನೆ ತನಗೆ ಸೇರಿದ್ದು ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆಗ ಆರೋಪಿತರು ಒಳಸಂಚು ಮಾಡಿ ದಾಖಲೆ ಸೃಷ್ಟಿ ಮಾಡಿಕೊಂಡಿರುವ ವಿಚಾರ ಬೆಳಕಿಗೆ ಬಂತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿತರು ದಾಖಲೆ ಸೃಷ್ಟಿ ಮಾಡಿಕೊಂಡಿರುವ ವಿಚಾರ ನನಗೆ ಮಾಹಿತಿ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಲಾದಂತೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಲಾದ ಹೇಳಿಕೆ ಭಾಗವನ್ನ ನಿಪಿ**-5** ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ**07.01.2016** ರ ಕ್ರಯಪತ್ರವನ್ನ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ**-2** ಎಂದು ಗುರುತಿಸಲಾಗಿದೆ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಆರೋಪಿತರಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಎಸ್.ಪಿ. ವಕೀಲರಿಂದಃ-</u>

ನಿಪಿ**-2** ರ ಕ್ರಯಪತ್ರವಾದ ಕಾಲಕ್ಕೆ **1** ನೇ ಆರೋಪಿ ನನ್ನ ತಾಯಿ ಮಾರಾಟ ಮಾಡಿದ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಈ ವಿಚಾರ ಹೊರತುಪಡಿಸಿ ನನಗೆ ಬೇರೆ ವಿಚಾರ ಮಾಹಿತಿ ಇಲ್ಲ ಎಂದರೆ ಸರಿ.

C.C.No.1852/2022
PW-2 CW-5

**<u>ಮರು ಸವಾಲುಃ ಇಲ್ಲಾ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
**ಓಃಹೇಃಕೇಃಸಃಇಃವಿಃಒಃ**

ಸಹಿ/-
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.**

ಎಸ್ಆರ್ಃ